ವೈದ್ಯಕೀಯ ಕಾಲೇಜಿನಲ್ಲಿ ಅಕ್ರಮಗಳು

394 (729) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿ ಸ್ಥಾಪಿಸಲಾಗಿರುವ ವೈದ್ಯಕೀಯ ಕಾಲೇಜಿನ ಸ್ಥಾಪನೆಯ ಸಂಬಂಧವಾಗಿ ಪೀಠೋಪಕರಣದ ಖರೀದಿಯೂ ಸೇರಿದಂತೆ ಇಲ್ಲಿಯವರೆಗೆ ಎಷ್ಟು ಹಣವನ್ನು ಯಾವ ಯಾವ ಬಾಬ್ತುಗಳಿಗಾಗಿ ವೆಚ್ಚ ಮಾಡಲಾಗಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ಈ ಕಾಲೇಜಿಗೆ ಯಾವ ಯಾವ ವೈದ್ಯ/ಬೋಧಕ ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ; (ಸಿಬ್ಬಂದಿ ಹೆಸರು ವಿವರ ಒದಗಿಸುವುದು)

ಇ) ಇವರುಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಅನುಸರಿಸಿರುವ ನಿಯಮಗಳೇನು; ಸರ್ಕಾರವು ನಿಗಧಿಪಡಿಸಿರುವ ರೋಸ್ಟರ್ ಪದ್ಧತಿಯನ್ನು ಪಾಲಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು)

ಈ) ಈ ಕಾಲೇಜಿನಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಪೀಠೋಪಕರಣ ಖರೀದಿಯಲ್ಲಿ ಅವ್ಯವಹಾರವಾಗಿರುವ ಬಗ್ಗೆ ದೂರುಗಳಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ)

1.	ಕಟ್ಟಡ (ಫೇಸ್–1 ಮತ್ತು 2)	ರೂ. 4600.00 ಲಕ್ಷ
2.	ಪೀಠೋಪಕರಣ ಖರೀದಿ	ರೂ. 298.16 ಲಕ್ಷ
3.	ವೇತನ	ರೂ. 1896.13 ಲಕ್ಷ
4.	ಇತರೆ	ರೂ. 376.49 ಲಕ್ಷ

ಆ) ನೇರ ನೇಮಕಾತಿ ಮತ್ತು ಹೊರಗುತ್ತಿಗೆ ಮೂಲಕ ಸರ್ಕಾರದ ನಿಯಮಾವಳಿಗಳಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ. (ಅನುಬಂಧದಲ್ಲಿ ತೋರಿಸಿದೆ.)

ಇ) ಶೈಕ್ಷಣಿಕ ಅರ್ಹತೆ, ಬೋಧನಾ ಅನುಭವ, ಮೆರಿಟ್ ಮತ್ತು ಮೀಸಲಾತಿ ಅನುಸರಿಸಲಾಗಿದೆ. ಬೋಧಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಮೀಸಲಾತಿ ಅನುಸಾರ ಲಭ್ಯವಿಲ್ಲದಿದ್ದಲ್ಲಿ ಇತರೆ ವರ್ಗದಿಂದ ಭರ್ತಿ ಮಾಡಲಾಗಿದೆ.

ಈ) ಹೌದು.

ಉ) ಪರಿಶೀಲನೆಯಿಂದ ನೇಮಕಾತಿ ಮತ್ತು ಖರೀದಿಯು ನಿಯಮಾನುಸಾರ ಜರುಗಿಸುವುದು ಕಂಡುಬಂದಿದೆ.

ಪ್ರಶ್ನೆ ಸಂಖ್ಯೆ: 729ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಬೋಧಕರ/ಬೋಧಕೇತರ ಸಿಬ್ಬಂದಿ ವಿವರ	ಹುದ್ದೆಗಳ ಸಂಖ್ಯೆ
ಬೋಧಕ ಸಿಬ್ಬಂದಿ		
1	ಪ್ರಾಧ್ಯಾಪಕರು	14
2	ಸಹ ಪ್ರಾಧ್ಯಾಪಕರು	13
3	ಸಹಾಯಕ ಪ್ರಾಧ್ಯಾಪಕರು	33
4	ಟ್ಯೂಟರ್ಸ್	26
5	ಸೀನಿಯರ್ ರೆಸಿಡೆಂಟ್	22
6	ಜೂನಿಯರ್ ರೆಸಿಡೆಂಟ್	37
ಬೋಧಕೇತರ ಸಿಬ್ಬಂದಿ		
1	ಶುಶ್ರೂಷಕರು	93
2	ಪ್ರಯೋಗಶಾಲಾ ತಂತ್ರಜ್ಞರು	48
3	ಕ್ಷ–ಕಿರಣ ತಂತ್ರಜ್ಞರು	05
4	ವೈದ್ಯಕೀಯ ದಾಖಿಲಾತಿ ತಂತ್ರಜ್ಞರು	12
5	ಸಹಾಯಕ ಗ್ರಂಥಪಾಲಕರು	02
6	ಚಿತ್ರಕಾರ	01

7	ಮಾಡೆಲ್ಲರ್	01
8	ಅಂಕೆ ಸಂಖ್ಯೆ ತಂತ್ರಜ್ಞರು	01
9	ಉಪ ಗ್ರಂಥಪಾಲಕರು	01
10	ವೈದ್ಯಕೀಯ ಸಮಾಜ ಸೇವಕರು	02
11	ಇತರೆ	105

ಬೀದರ್ ಜಿಲ್ಲೆಗೆ ವಕ್ಫ್ ಅನುದಾನದ ಬಿಡುಗಡೆ

395 (730) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಕ್ಫ್ ಮಂಡಳಿಯಿಂದ ಅನುದಾನವನ್ನು ಕೋರಿ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ (ಪ್ರಸ್ತಾವನೆಗಳ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಇ) ಈ ಅನುದಾನದಲ್ಲಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳೇನು (ಪೂರ್ಣ ವಿವರಗಳನ್ನು ಒದಗಿಸುವುದು);

ಈ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಅಪೂರ್ಣವಾಗಿವೆ;

ಉ) ಹಾಗಿದ್ದಲ್ಲಿ, ಅಪೂರ್ಣ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕ್ಷೇತ್ರವಾರು ವಿವರವನ್ನು ಅನುಬಂಧ 'ಅ' ರಲ್ಲಿ ನೀಡಲಾಗಿದೆ.

ಆ) ಕ್ಷೇತ್ರವಾರು ವಿವರವನ್ನು ಅನುಬಂಧ 'ಅ' ರಲ್ಲಿ ನೀಡಲಾಗಿದೆ.